International Research Journal of Humanities, Language and Literature
ISSN: (2394-1642)
Impact Factor 7.972 Volume 12, Issue 12, Dec 2025
Association of Academic Researchers and Faculties (AARF)
Website-www.aarf.asia, Email : editor@aarf.asia , editoraarf@gmail.com

# ಸ್ವಾತಂತ್ರ್ಯ ಪೂರ್ವ ಕಾಲಘಟ್ಟದ ನಾಟಕಕಾರ್ತಿಯರ ಸುಧಾರಣಾವಾದಿ ಮನೋಭಾವದ ಅನುಕರಣಾತ್ಮಕ ನೆಲೆಯ ಸ್ವರೂಪ

Author : ಡಾ. ಕಾವ್ಯಶ್ರೀ ಎಚ್.
ಕನ್ನಡ ಉಪನ್ಯಾಸಕಿ,
ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜು,
ಶೇಷಾದ್ರಿಪುರಂ, ಬೆಂಗಳೂರು
Author : Dr. Kavyashree H. , Lecturer in Kannada,
Seshadripuram Independent Pre-University College, Seshadripuram, Bangalore.

Abstract : ಸಾಹಿತ್ಯ ಚರಿತ್ರೆಯಲ್ಲಿಯೇ ಮಹಿಳೆಯರ ಕೊಡುಗೆ ಸರಿಯಾಗಿ ದಾಖಲಾಗಿಲ್ಲ. ಮತ್ತೊಂದೆಡೆ, ನಾಟಕಕಲೆ ಅಥವಾ ರಂಗಭೂಮಿಯಲ್ಲಿ ಮಹಿಳೆಗೆ, ಸಮಾಜವು ನೀಡಿದ್ದ ಸ್ಥಾನಮಾನ. ನಟಿಯರನ್ನು ಹೀನಾಯವಾಗಿ, ನೋಡುತ್ತಿದ್ದುದರಿಂದ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅತ್ಯಂತ ಕೆಳವರ್ಗದಲ್ಲಿದ್ದವರು ಮಾತ್ರ ಈ ಮಾಧ್ಯಮಕ್ಕೆ ಬರುತ್ತಿದ್ದುದು. ಮಹಿಳೆಯರು ನಾಟಕ ನೋಡುವುದಕ್ಕೂ ನಿಷೇಧವಿದ್ದದ್ದರಿಂದ ಕ್ರಿಯಾತ್ಮಕವಾಗಿ ತೊಡಗಿಕೊಳ್ಳುವುದು ಅಸಾಧ್ಯವಾಗಿ, ಈ ಮಡಿ ಮೈಲಿಗೆಯ ಭಾವ ನಾಟಕ ಪ್ರಕಾರ ಮತ್ತು ಮಹಿಳೆಯರ ನಡುವೆ ಅಂತರವನ್ನು ಸೃಷ್ಟಿಸಿತ್ತು. ಈ ಎಲ್ಲಾ ಕಾರಣಗಳಿಂದ ಇತರ ಸಾಹಿತ್ಯ ಪ್ರಕಾರಕ್ಕೆ ಹೋಲಿಸಿದರೆ ನಾಟಕರಚನಾ ಕ್ಷೇತ್ರಕ್ಕೆ ಮಹಿಳೆಯರ ಪ್ರವೇಶ ತಡವಾಗಿ ಆಗಿದೆ. ಆದರೂ ಇವೆಲ್ಲವುಗಳ ನಡುವಿನಲ್ಲಿಯೇ, ಸ್ವಾತಂತ್ರ್ಯ ಪೂರ್ವ ಕಾಲದ ತಿರುಮಲಾಂಬಾ, ಕಲ್ಯಾಣಮ್ಮ, ಸೀತಾದೇವಿ ಪಡುಕೋಣೆ, ಶಾರದಾಶಾಸ್ತ್ರಿ, ಸರಸ್ವತಿಬಾಯಿ ರಾಜವಾಡೆ, ತಿರುಮಲೆ ರಾಜಮ್ಮ, ಸರಸ್ವತಿ ದೇವಿ ಗೌಡರ್ ಮುಂತಾದವರು, ವಿವಿಧ ಕಾಲಘಟ್ಟಗಳಲ್ಲಿ ನಾಟಕ ರಚನೆ ಮಾಡಿದ್ದು ಹಲವಾರು ನಾಟಕಗಳು ಯಶಸ್ವೀ ಪ್ರದರ್ಶನವನ್ನೂ ಕಂಡಿವೆ. ಈ ನಾಟಕಕಾರ್ತಿಯರ ಕೃತಿರಚನೆಯ ಕಾಳಜಿಗಳನ್ನು ಅಧ್ಯಯನ ಮಾಡುವುದು ಹಾಗೂ ಅವರ ಸಾಮಾಜಿಕ, ಸಾಂಸ್ಕೃತಿಕ ಸಂವೇದನೆಯ ನೆಲೆಗಳನ್ನು ಗುರುತಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಪ್ರವೇಶ : ಭಾರತಕ್ಕೆ ಲಗ್ಗೆ ಇಟ್ಟ ಆಂಗ್ಲ ವಸಾಹತುಶಾಹಿಯ ಉದ್ದೇಶ ಯಾಜಮಾನ್ಯವನ್ನು ಸ್ಥಾಪಿಸುವುದೇ ಆಗಿದ್ದರೂ, ಮಹಿಳೆಯರಿಗೆ, ಕೆಳವರ್ಗದವರಿಗೆ ಸಾಮಾಜಿಕ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಅವುಗಳ ಪ್ರಯತ್ನ ಸ್ತುತ್ಯಾರ್ಹವಾಗಿದೆ. ಇಂತಹ ಸೀಮಿತ ಅವಕಾಶದಲ್ಲೇ, ಶಿಕ್ಷಣ ಪಡೆದ ಕೆಲವು ಮಹಿಳೆಯರು ಸಾಹಿತ್ಯರಚನೆಯಲ್ಲಿ ತೊಡಗಿದ್ದು, ಮಹತ್ವದ ಸಾಂಸ್ಕೃತಿಕ ಘಟ್ಟ. ಇವರು ಸಾಹಿತ್ಯಕ್ಕಾಗಿ ಸಾಹಿತ್ಯ ರಚಿಸಿದವರಲ್ಲ. ಪ್ರತಿಕ್ರಿಯೆ, ರಂಜನೆ, ರಸಗಳನ್ನೂ ದಾಟಿ ಇವರ ಅಭಿವ್ಯಕ್ತಿ ಮುಂದುವರೆದಿದೆ. ಹೊಸ ಮೌಲ್ಯಗಳನ್ನು ಸ್ವೀಕರಿಸಿ ಪಸರಿಸುವುದೇ ಅಲ್ಲದೆ, ಸಂಕ್ರಮಣಾವಸ್ಥೆಯಲ್ಲಿದ್ದ ಸಮಾಜ ಅನ್ಯಸಂಸ್ಕೃತಿಯ ಪ್ರಭಾವಕ್ಕೊಳಗಾಗಿ, ತಮ್ಮ ಸಂಸ್ಕೃತಿ ಎಲ್ಲಿ ಹಿಂದೆ ಸರಿಯುವುದೋ ಎಂಬ ಆತಂಕದಿಂದ ನೀತಿ ಪ್ರಧಾನ ಕೃತಿಗಳನ್ನೂ ರಚಿಸಿದರು. ನಂಜನಗೂಡು ತಿರುಮಲಾಂಬಾ, ಆರ್.ಕಲ್ಯಾಣಮ್ಮ, ತಿರುಮಲೆ ರಾಜಮ್ಮ (ಭಾರತಿ), ಸೀತಾದೇವಿ ಪಡುಕೋಣೆ, ಸರಸ್ವತಿ ಬಾಯಿ ರಾಜವಾಡೆ (ಗಿರಿಬಾಲೆ), ಸರಸ್ವತಿದೇವಿ ಗೌಡರ್, ಶಾರದಾಶಾಸ್ತ್ರಿ ಮೊದಲಾದವರು ಸಮಕಾಲೀನ ಸಾಮಾಜಿಕ ಸಮಸ್ಯೆಗಳಾದ ಬಾಲ್ಯವಿವಾಹ, ವರದಕ್ಷಿಣೆ, ಸತಿಪದ್ಧತಿ ಹಾಗೂ ಸ್ತ್ರೀಶಿಕ್ಷಣ, ವಿಧವಾ ವಿವಾಹ, ಆರ್ಯಧರ್ಮ, ರಾಷ್ಟ್ರೀಯತೆಯ ವಿಚಾರಗಳಿಗೆ ಹೆಚ್ಚು ಒತ್ತು ಕೊಟ್ಟರು.

ನಾಟಕಗಳ ವಸ್ತು, ರಚನಾ ವಿನ್ಯಾಸ ಹಾಗೂ ಧೋರಣೆಗಳನ್ನು ಪರಿಗಣಿಸಿ ಮಹಿಳೆಯರು ಬರೆದ ನಾಟಕಗಳನ್ನು ಈ ಅಧ್ಯಯನದ ದೃಷ್ಟಿಯಿಂದ ಮುಖ್ಯವಾಗಿ ಎರಡು ಕಾಲಘಟ್ಟಗಳಲ್ಲಿ ವಿಂಗಡಿಸಿ ವಿವೇಚಿಸಬಹುದು. ಸ್ವಾತಂತ್ರ್ಯಪೂರ್ವದ ಕಾಲಘಟ್ಟ ಮತ್ತು

© Association of Academic Researchers and Faculties (AARF)
A Monthly Double-Blind Peer Reviewed Refereed Open Access International e-Journal - Included in the International Serial Directories.

ಸ್ವಾತಂತ್ರ್ಯೋತ್ತರ ಕಾಲಘಟ್ಟ. ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ 1947ರಿಂದ 1975ರವರೆಗೆ ಮೊದಲ ಹಂತ ಮತ್ತು 1975ರಿಂದ 2000ರವರೆಗೆ ಎರಡನೆಯ ಹಂತ.

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಶಿಕ್ಷಣದ ಅವಕಾಶವನ್ನು ಪಡೆದ ಮಹಿಳೆಯರಲ್ಲಿ ಕೆಲವರು ಸಾಹಿತ್ಯ ರಚನೆಯಲ್ಲೂ ತೊಡಗಿದರು. ಅವರಲ್ಲಿ ಪ್ರಮುಖರಾದ ನಂಜನಗೂಡಿನ ತಿರುಮಲಾಂಬಾ, ಆರ್. ಕಲ್ಯಾಣಮ್ಮ, ಶಾರದಾಶಾಸ್ತ್ರಿ ಸರಸ್ವತಿದೇವಿಗೌಡರ, ಸರಸ್ವತಿದೇವಿ ರಾಜವಾಡೆ ಮೊದಲಾದವರು ಕತೆ ಕಾದಂಬರಿಗಳನ್ನು ಮುಖ್ಯ ಮಾಧ್ಯಮವಾಗಿರಿಸಿಕೊಂಡಿದ್ದರೂ ನಾಟಕ ಪ್ರಕಾರದಲ್ಲಿಯೂ ಕೃಷಿಮಾಡಿದ್ದಾರೆ.

ಅಂದು ಮಹಿಳೆಯರು ಅನುಭವಿಸುತ್ತಿದ್ದ ನೋವು, ಶೋಷಣೆ, ಕೌಟುಂಬಿಕ ಹಾಗೂ ಸಾಮಾಜಿಕ ಕಟ್ಟುಪಾಡುಗಳ ಹಿನ್ನೆಲೆಯಲ್ಲಿ ಸ್ತ್ರೀಯರ ಸ್ಥಿತಿಗತಿಗಳನ್ನು ಸುಧಾರಿಸುವ ಪ್ರಮುಖ ಉದ್ದೇಶ ಅವರೆಲ್ಲರ ಬರವಣಿಗೆಗೆ ಕಾರಣವಾಗಿತ್ತು.

ನಾಟಕಕಾರ್ತಿಯರು ಬರೆದ ನಾಟಕಗಳಲ್ಲಿ ವಸ್ತುವೈವಿಧ್ಯತೆ ಕಂಡುಬರುತ್ತದೆ. ಸ್ವಾಭಾವಿಕವಾಗಿಯೇ ಹೆಣ್ಣು ಅಲ್ಲಿಯ ಕೇಂದ್ರ. ಅವಳ ನೋವು-ನಲಿವು, ಸಮಸ್ಯೆ-ಪರಿಹಾರದ ಸ್ಥಾನಮಾನಗಳ ಸುತ್ತ ನಾಟಕಗಳನ್ನು ರಚಿಸಲಾಗಿದೆ. ಹೆಣ್ಣಿನ ಕೌಟುಂಬಿಕ ಬದುಕಿನ ಚಿತ್ರಣವಲ್ಲದೇ ಅವಳ ಸಾಮಾಜಿಕ ಆರ್ಥಿಕ ಆಯಾಮಗಳೂ ನಾಟಕದ ವಸ್ತುವಾಗಿ ಮೂಡಿ ಬಂದಿವೆ. ಅಲ್ಲದೇ ಪೌರಾಣಿಕ ವಸ್ತುವನ್ನೇ ಆಯ್ದುಕೊಂಡು ಅದನ್ನು ಸ್ತ್ರೀಪರ ದೃಷ್ಟಿಕೋನದಿಂದ ವಿಶ್ಲೇಷಿಸುವ, ಸಮಕಾಲೀನ ಸಮಸ್ಯೆಯೊಂದಿಗೆ ಸಮೀಕರಿಸುವ ಹಾಗೂ ಅಲ್ಲಿಯ ಮುಖ್ಯ ಸ್ತ್ರೀಪಾತ್ರ ಪೋಷಣೆಯಲ್ಲಿ ಪ್ರತಿಭಟನಾತ್ಮಕ ನಿಲುವಿನ ತಿರುವು ನೀಡುವ ನಾಟಕಗಳೂ ಇವೆ. ಸತೀತ್ವದಿಂದ ದೇಶಭಕ್ತಿಯವರೆಗೆ ಮೌಲ್ಯಗಳನ್ನು ಉದಾತ್ತೀಕರಿಸಿದ ನಾಟಕಗಳಿವೆ.

ಆಗಿನ ಪುರುಷಪ್ರಧಾನ ಸಮಾಜದಲ್ಲಿ ಮಹಿಳೆಗೆ ಸ್ವಂತ ಅಸ್ತಿತ್ವದ ಬಗ್ಗೆ ಯೋಚಿಸಬೇಕೆನ್ನುವ ಕಲ್ಪನೆಯೇ ಇರಲಿಲ್ಲವಾದ್ದರಿಂದ, ಈ ಮೊದಲ ಪೀಳಿಗೆಯ ಸಾಹಿತ್ಯದಲ್ಲಿ ಮಹಿಳಾ ಪಾತ್ರಗಳ ಆಯಾಮಗಳು ಅತ್ಯಂತ ಸೀಮಿತವಾಗಿದ್ದವು. ನಾಲ್ಕು ಜನರೆದುರು ನಿಂತು ಮಾತನಾಡುವುದು ಕಷ್ಟವಾಗಿದ್ದ ದಿನಗಳಲ್ಲಿ, ತಾವು ಕಂಡ ಸಾಮಾಜಿಕ ಅನಿಷ್ಟಗಳ ಬಗ್ಗೆ ಬರೆಯುವುದು ಸಾಧನೆಯೇ ಸರಿ. ಇವುಗಳಿಗೆ ಸಾಹಿತ್ಯಿಕ ಮೌಲ್ಯ, ಕಲಾತ್ಮಕತೆಗಿಂತ ಹೆಚ್ಚಾಗಿ ಸಾಂಸ್ಕೃತಿಕ ಮಹತ್ವವಿದೆ.

ಒಟ್ಟು ಕನ್ನಡ ಮಹಿಳಾ ಸಾಹಿತ್ಯದಲ್ಲಿ ಪ್ರತಿಭೆಗೆ ಸಂಬಂಧಿಸಿದಂತೆ ಎರಡು ಬಗೆಯ ಮಾದರಿಗಳನ್ನು ನಾವು ಕಾಣಬಹುದು ಎಂದು ಡಿ.ಆರ್. ನಾಗರಾಜ ಅವರು ಹೇಳಿದ್ದಾರೆ. ಒಂದು ಗಾರ್ಗಿಯ ಮಾದರಿ, ಇನ್ನೊಂದು ಕಾತ್ಯಾಯಿನಿಯ ಮಾದರಿ, ಇವೆರಡೂ ಉಪನಿಷತ್ ಸಾಹಿತ್ಯದಲ್ಲಿ ಬರುವ ಎರಡು ವಿಭಿನ್ನ ಸ್ತ್ರೀಪಾತ್ರಗಳ ಆಧಾರದ ಮೇಲೆ ಕಟ್ಟಿದ ತಾತ್ವಿಕ ಆಕೃತಿಗಳು. ಕಾತ್ಯಾಯಿನಿಯ ಮಾದರಿಯ ಸ್ತ್ರೀ ತಾಯಿಯಾಗಿ, ಹೆಂಡತಿಯಾಗಿ, ಅಕ್ಕ-ತಂಗಿಯಾಗಿ, ಗೆಳತಿಯಾಗಿ, ಗೃಹದೇವತೆಯಾಗಿ ತನ್ನ ಪಾತ್ರವನ್ನು ಚೊಕ್ಕವಾಗಿ ನಿರ್ವಹಿಸುತ್ತಾಳೆ. ಆದರೆ ಈಕೆಯನ್ನು ಕೇವಲ ಗೃಹಿಣಿ ಎಂದು ಅಸಡ್ಡೆ ಮಾಡಲಾಗದು. ಏಕೆಂದರೆ ತನ್ನ ತ್ಯಾಗ-ಬಲಿದಾನ ಇತ್ಯಾದಿಗಳಿಗೆ ಏನೂ ಬೆಲೆಯಿಲ್ಲ ಎಂಬ ಆತ್ಮಪ್ರಜ್ಞೆ ಇವಳಿಗೆ ಬಂದರೆ, ಎಲ್ಲವನ್ನೂ ಧಿಕ್ಕರಿಸಿ ನಡೆಯಬಲ್ಲ ಶಕ್ತಿಯೂ ಇವಳಿಗಿದೆ. ಇಬ್ಸನ್ನನ ದಿ ಡಾಲ್ಸ್ ಹೌಸ್ ನಾಟಕದಲ್ಲಿ ಇಂತಹ ಕಾತ್ಯಾಯಿನಿಯ ಪಾತ್ರದ ಚಿತ್ರಣವಿದೆ. ವಿಜಯಮ್ಮ, ಗೀತಾ ರಾಮಾನುಜಂ, ಎಂ.ಎಸ್. ವೇದಾ, ಸಂಧ್ಯಾ ಎಸ್ ಅವರ ನಾಟಕಗಳಲ್ಲಿಯೂ ಸಹ ವ್ಯವಸ್ಥೆಯ ಚೌಕಟ್ಟಿನ ಒಳಗಿದ್ದುಕೊಂಡೇ ವ್ಯವಸ್ಥೆಯನ್ನು, ಒಳಗಿಂದೊಳಗೇ ಧಿಕ್ಕರಿಸುವ ಕಾತ್ಯಾಯಿನಿಯ ಪಾತ್ರಗಳಿವೆ.

ಇನ್ನೊಂದು ಮಾದರಿ, ಗಾರ್ಗಿಯ ಮಾದರಿ, ಇದಕ್ಕಿಂತ ಬೇರೆಯಾದದ್ದು, ಶೋಷಣೆಯ ವಿರುದ್ಧ ಉಗ್ರವಾಗಿ ಬಂಡಾಯ ಹೂಡುವ, ಅನ್ಯಾಯ ಅತ್ಯಾಚಾರಗಳನ್ನು ತೀವ್ರವಾಗಿ ಪ್ರತಿಭಟಿಸುವ ಮಾದರಿ-ಮುಖ್ಯವಾಗಿ ಮೂರು ಮತ್ತು ನಾಲ್ಕನೇ ಘಟ್ಟದಲ್ಲಿ ಈ ಸಂವೇದನೆ ಅಭಿವ್ಯಕ್ತಗೊಂಡಿದೆ. ಆದರೆ ಅನೇಕ ಸಲ, ಈ ರೀತಿಯ ಪ್ರತಿಭಟನೆಯಲ್ಲಿ ಆತ್ಮ ವೈಭವೀಕರಣದ ಅಪಾಯ ಇರುವುದನ್ನೂ ಕಾಣಬಹುದು. ಗಾರ್ಗಿ ಹಾಗೂ ಕಾತ್ಯಾಯಿನಿಯ ಇವೆರಡೂ ಮಾದರಿಗಳ ಪ್ರತಿಭೆಗಳು ಒಂದೆಡೆ ಸೇರಿರುವುದು ನಾಲ್ಕನೇ ಘಟ್ಟದ ಕೆಲವು ಕೃತಿಗಳಲ್ಲಿ ಕಂಡುಬರುತ್ತದೆ.

ಕನ್ನಡದ ನಾಟಕ ಸಾಹಿತ್ಯಕ್ಕೆ ಸಮೃದ್ಧವಾದ ಸಂಸ್ಕೃತ ನಾಟಕ ಪರಂಪರೆಯ ಹಿನ್ನೆಲೆಯೊಂದಿಗೆ, ಪಾಶ್ಚಾತ್ಯ ನಾಟಕಗಳ ಪ್ರಭಾವವೂ ಇದೆ. ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ, ಸ್ತ್ರೀವಾದಿ ಸಾಹಿತ್ಯ ಪಂಥಗಳಿಂದ ಪ್ರೇರಣೆ ಪಡೆಯುವುದರೊಂದಿಗೆ

ರಂಗಭೂಮಿಯ ವಿವಿಧ ಮಜಲುಗಳು ನಾಟಕ ಸಾಹಿತ್ಯವನ್ನು ದುಡಿಸಿಕೊಂಡಿದೆ. ಇವೆಲ್ಲವುಗಳ ಹೊರತಾಗಿಯೂ ಪಂಥ, ಸಿದ್ಧಾಂತ, ಚಳುವಳಿಗಳನ್ನು ಮೀರಿ ವಿಶಿಷ್ಟ ನಾಟಕಗಳು ರಚಿತವಾಗಿದೆ.

ಇತರ ಸಾಹಿತ್ಯ ಪ್ರಕಾರಗಳಿಗೆ ಹೋಲಿಸಿದರೆ ಕನ್ನಡದಲ್ಲಿ ನಾಟಕ ಸಾಹಿತ್ಯದ ಬಾಹುಳ್ಯವಿಲ್ಲ. ನಾಟಕಕಾರರ ಸಂಖ್ಯೆಯೂ ಕಡಿಮೆ. ಇಂತಹ ಸಂದರ್ಭದಲ್ಲಿ ಅಕ್ಷರ ಲೋಕಕ್ಕೆ ತಡವಾಗಿ ಪ್ರವೇಶಿಸಿದ ಮಹಿಳೆಯರು ನಾಟಕ ಪ್ರಕಾರಕ್ಕೆ ತಮ್ಮನ್ನು ತೆರೆದುಕೊಂಡದ್ದು ತಡವಾಗಿಯೇ. ತಡವಾಗಿಯೆಂದರೂ ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲೇ ಮೊದಲ ಲೇಖಕಿ, ಪ್ರಕಾಶಕಿ ಎಂದೇ ಪ್ರಸಿದ್ಧರಾದ ನಂಜನಗೂಡು ತಿರುಮಲಾಂಬಾ ಮೊದಲ ನಾಟಕಕಾರ್ತಿಯೂ ಹೌದು. ಇದೇ ಕಾಲಘಟ್ಟದಲ್ಲಿ ಆರ್.ಕಲ್ಯಾಣಮ್ಮ, ತಿರುಮಲೆ ರಾಜಮ್ಮ, ಸೀತಾದೇವಿ ಪಡುಕೋಣೆ, ಸರಸ್ವತಿಬಾಯಿ ರಾಜವಾಡೆ ಇನ್ನೂ ಹಲವರು ನಾಟಕಗಳ ರಚನೆಗೆ ತೊಡಗಿದ್ದು ಮಹಿಳಾ ನಾಟಕ ಸಾಹಿತ್ಯ ಪರಂಪರೆಗೆ ಭದ್ರಬುನಾದಿಯನ್ನು ಹಾಕಿದೆ.

ಇತಿಹಾಸ `ಹಿಸ್ ಸ್ಟೋರಿ' ಆದಂತೆ, ಕನ್ನಡ ಸಾಹಿತ್ಯ ಚರಿತ್ರೆ ಮತ್ತು ವಿಮರ್ಶೆಯೂ ಪುರುಷರ ಅಧೀನವಾಗಿದ್ದರಿಂದ ಅಲ್ಲಿಯೂ ನಾಟಕಕಾರ್ತಿಯರಿಗೆ ಸ್ಥಾನ ಸಿಕ್ಕಿಲ್ಲ. ಮತ್ತೊಂದು ಮುಖ್ಯವಾದ ಅಂಶವೆಂದರೆ, ನಾಟಕಕಾರ್ತಿಯರು ಸಾಹಿತ್ಯ ಪಂಥಗಳನ್ನು ಅನುಸರಿಸಿ ಬರೆಯುದಿದ್ದುದು. ಹಾಗೆಂದು ಅವುಗಳ ಪ್ರಭಾವ ನಾಟಕಕಾರ್ತಿಯರ ಮೇಲಾಗಿಲ್ಲ ಎಂದು ಹೇಳಲಾಗುವುದಿಲ್ಲ.

ಆಧುನಿಕ ಕನ್ನಡದ ಮೊದಲ ಕಾದಂಬರಿಕಾರ್ತಿ, ಪ್ರಕಾಶಕಿ, ಪ್ರತಕರ್ತೆ, ಸಂಪಾದಕಿ, ನಾಟಕಕಾರ್ತಿ, ಸ್ತ್ರೀಪರಚಿಂತಕಿ ಹಾಗೂ ಮೊದಲ ರಂಗನಿರ್ದೇಶಕಿಯೂ ಆಗಿ ಅನೇಕ ಮೊದಲುಗಳನ್ನು ಸಾಧಿಸಿದವರು ತಿರುಮಾಲಾಂಬಾ. ಇವರು ಒಟ್ಟು ಆರು ನಾಟಕಗಳನ್ನು ರಚಿಸಿದ್ದಾರೆ. ರಮಾನಂದ, ಭಾರ್ಗವ ಗರ್ವಭಂಗ, ಚಂದ್ರವದನಾ, ವಿವೇಕೋದಯ (ಪ್ರಕಟಿತ) ಭಾನುತೇಜ ವಿಜಯ, ಶ್ರೀಮಂತಿನಿ ವಿಜಯ (ಅಪ್ರಕಟಿತ). ಇವರ ಕೃತಿಗಳಲ್ಲಿ ನೀತಿ ಪ್ರತಿಪಾದನೆ, ಸಮಾಜದ ಗುಣ-ದೋಷಗಳ ವಾಸ್ತವಚಿತ್ರಣ, ಸನಾತನ ಸ್ತ್ರೀ ಮೌಲ್ಯವನ್ನು ಪ್ರತಿಪಾದಿಸುವ ಶಿಕ್ಷಣ ನೀತಿ, ಪಿತೃಪ್ರಧಾನ ಸಂಸ್ಕೃತಿಯೆಡೆಗೆ ಒಲವು ಕಂಡುಬರುತ್ತದೆ.

ಕಲ್ಯಾಣಮ್ಮನವರು ಅನೇಕ ಸಾಮಾಜಿಕ, ಚಾರಿತ್ರಿಕ ಮತ್ತು ಪೌರಾಣಿಕವಸ್ತು ವಿನ್ಯಾಸವಿರುವ ನಾಟಕಗಳನ್ನು ರಚಿಸಿದ್ದಾರೆ. ಸ್ವದೇಶಾಭಿಮಾನ, ಸ್ತ್ರೀ ಶಿಕ್ಷಣ, ವರದಕ್ಷಿಣೆಯ ಸಮಸ್ಯೆ, ಹಾಗೂ ಸತೀತ್ವದ ಪ್ರತಿಪಾದನೆ ಇವರ ನಾಟಕಗಳ ಮುಖ್ಯ ಆಶಯವಾಗಿದೆ.

`ಭಾರತಿ’ ಎಂಬ ಅಂಕಿತದಿಂದ ಪ್ರಸಿದ್ಧರಾದ ತಿರುಮಲೆ ರಾಜಮ್ಮನವರು ಕೆಲವೇ ಕೃತಿಗಳನ್ನು ಬರೆದಿದ್ದರು ಮೌಲ್ಯಯುತ ಕೃತಿಗಳನ್ನು ನೀಡಿದ್ದಾರೆ. ಅವರು ಬರೆದ `ತಪಸ್ವಿನಿ'. `ಮಹಾಸತಿ', `ವಾತ್ಸಲ್ಯ ತರಂಗಲೀಲಾ' ಎಂಬ ಮೂರು ಕೃತಿಗಳು "ಭಾರತೀ ರೂಪಕತ್ರಯೀ" ಎಂದೇ ಪ್ರಸಿದ್ಧವಾದ ನಾಟಕಗಳಾಗಿವೆ. ಹಾಗೂ ಈ ಕೃತಿಗಳು ಅವರಿಗೆ ವಿಶೇಷ ಕೀರ್ತಿಯನ್ನು ತಂದುಕೊಟ್ಟಿವೆ.

ಮೊದಲ ತಲೆಮಾರು ಪ್ರಧಾನ ಸಾಹಿತ್ಯ ಮುಂದಿಟ್ಟ ಸಾಹಿತ್ಯದ ಮಾದರಿಗಳನ್ನು ಅನುಸರಿಸಿಕೊಳ್ಳುವುದನ್ನು ಆದರ್ಶವೆಂದು ಭಾವಿಸಿತು. ಆದ್ದರಿಂದಲೇ ಸ್ಥಾಪಿತ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಆವರಣಕ್ಕೆ ತಮ್ಮನ್ನು ಒಪ್ಪಿಸಿಕೊಳ್ಳುವ ಮಾರ್ಗವನ್ನು ಒಂದು ಕಾಲದವರೆಗೆ ನಾಟಕಕಾರ್ತಿಯರು ಮಾಡಿದರು. ಹೀಗಾಗಿ ಪ್ರಧಾನಧಾರೆಯ ದೃಷ್ಟಿಯಲ್ಲಿ ತಾವು ಉತ್ತೀರ್ಣರಾಗುವ, ಅದರಿಂದ ಭೇಷ್ ಎನ್ನಿಸಿಕೊಳ್ಳುವ ಕಡೆಗೇ ಅವರ ಒತ್ತು ಬಿದ್ದಿತ್ತು. ಆ ದಿಕ್ಕಿನಿಂದ ಮಾನ್ಯತೆಯೋ ರಿಯಾಯಿತಿಯೋ ದೊರೆತಾಗ ಕಿರೀಟ ಸಿಕ್ಕಷ್ಟು ಸಂಭ್ರಮಿಸಿದ್ದು ಸುಳ್ಳಲ್ಲ.

ಕೆಲವು ದಶಕಗಳ ನಂತರ ತನ್ನೆಲ್ಲ ಪ್ರಯತ್ನಗಳ ಬಳಿಕವೂ ತನ್ನ ರಚನೆಗಳಿಗೆ ಸಿಗಬೇಕಾದ ಮಾನ್ಯತೆ ಪ್ರಧಾನಧಾರೆಯಿಂದ ದೊರೆಯುತ್ತಿಲ್ಲ ಎಂಬುದು ನಾಟಕಕಾರ್ತಿಯರ ಅರಿವಿಗೆ ಬಂತು. ಕೆಲವರು ತಮ್ಮ ರಚನೆಗಳ ಕುರಿತ ಈ ನಿರ್ಲಕ್ಷವನ್ನು ಉಪೇಕ್ಷಿಸಿ ತಮ್ಮ ಪಾಡಿಗೆ ತಾವು ನಿರಾತಂಕದಿಂದ, ಸುತ್ತಲಿನ ವಿದ್ಯಮಾನಗಳಿಗೆ ದಿವ್ಯನಿರ್ಲಕ್ಷ ತೋರಿ ಬರೆದುದೂ ಇದೆ. ಇಂತಹ ನಾಟಕಕಾರ್ತಿಯರ ಒಂದು ವರ್ಗವಿದೆ. ಇವರು ತಮ್ಮ ಸಾಹಿತ್ಯವನ್ನು ವಿಮರ್ಶಾಲೋಕ ಗಮನಿಸದೇ ಇದ್ದಾಗಲೂ, ತಮ್ಮ ಆಂತರಿಕ ಒತ್ತಡಗಳು ಮತ್ತು ಸಾಂದರ್ಭಿಕ ಅಗತ್ಯಗಳ ಪೂರೈಕೆಗಾಗಿಯೂ ನಾಟಕಗಳನ್ನು ನೀಡತೊಡಗಿದರು.

ಇಪ್ಪತ್ತೊಂದನೆಯ ಶತಮಾನದ ಮೊದಲ ದಶಕವು ಮಹಿಳೆಯರನ್ನು ದ್ವಂದ್ವಗಳು ಕಾಡಿದ ಅವಧಿಯಾಗಿದೆ. ಯಾವುದನ್ನು ಯಾವ ಬಗೆಯಲ್ಲಿ ಸ್ವೀಕರಿಸಬೇಕು; ಹೇಗೆ ಪ್ರತಿಕ್ರಿಯಿಸಬೇಕು ಎಂಬುದನ್ನು ನಿರ್ಧರಿಸುವಲ್ಲಿ ಗೊಂದಲಗೊಂಡ ಕಾಲವಿದು. ಏಕೆಂದರೆ ಕುಟುಂಬ ವ್ಯವಸ್ಥೆಯೊಳಗೆ ಅವಿಭಾಜ್ಯ ಅಂಗವಾಗಿದ್ದು ಭಾವನಾತ್ಮಕವಾಗಿ ಅದರಲ್ಲೇ ಸುಖ ಕಾಣುತ್ತ ಬಂದ ಭಾರತೀಯ ಮಹಿಳೆ ಕುಟುಂಬವನ್ನೂ ಉಳಿಸಿಕೊಂಡು, ಅದರೊಳಗಿನ ತಾರತಮ್ಯ, ದಮನನೀತಿಗಳನ್ನೂ ವಿರೋಧಿಸಬೇಕಾದ ಎರಡು ದೋಣಿಗಳಲ್ಲಿ ಕಾಲಿಟ್ಟು ಯಾತನೆ ಅನುಭವಿಸಿದ್ದೇ ಹೆಚ್ಚು. ಸಾವಿರಾರು ವರ್ಷಗಳಿಂದ ಹೆಣ್ಣಿನ ಬಗೆಗಿನ ಸ್ಥಾಪಿತ ಧೋರಣೆಗಳನ್ನು ನಿಸರ್ಗಸಹಜವೆಂದು ನಂಬಿಸಿದ ಮತ್ತು

ನಂಬಿದ ಸಮಾಜದ ವಂಚನೆಯನ್ನು ಅವರು ಅರಿಯುವಂತಾದುದು ವಾಸ್ತವ. ಮರ್ಯಾದೆಯ ಹೆಸರಿನಲ್ಲಿ ಹೆಣ್ಣನ್ನು ತೆರೆಯಮರೆಯಲ್ಲೇ ಉಳಿಸಿದ, ಅವರ ಅಂತಃಶಕ್ತಿಯ ಕತ್ತು ಹಿಸುಕಿದವರಿಗೆ ಉತ್ತರವಾಗಿ ಅನೇಕ ನಾಟಕಕಾರ್ತಿಯರು ದನಿಯೆತ್ತಿದ್ದಾರೆ. ಹಾಗೆಯೇ ತಮ್ಮ ಸಂರಕ್ಷಣೆಯ ನೆಪದಲ್ಲಿ ಬಂಧಿಗಳಾಗಿಸಿದ ಶಕ್ತಿಗಳ ಹೊಂಚನ್ನೂ ಅರಿತಿದ್ದಾರೆ. ಸಂಪ್ರದಾಯದ ಕಪ್ಪೆಚಿಪ್ಪಿನೊಳಗೆ ತಮ್ಮ ಕೈಕಾಲುಗಳು, ಮೈಮನಸ್ಸುಗಳನ್ನೆಲ್ಲ ಅವಿತಿರಿಸಿ ಬಂಧಿಗಳಾಗಿದ್ದ ಅವರಿಗೆ ಎಲ್ಲವನ್ನೂ ಬಯಲಾಗಿಸಲು ಮೊದಲಿಗೆ ಸಾಧ್ಯವಾಗಲಿಲ್ಲ.

ಇತ್ತೀಚಿನ ಎರಡು ದಶಕಗಳಿಂದ ಬರೆಯುತ್ತಿರುವ ನಾಟಕಕಾರ್ತಿಯರು ಲಿಂಗತಾರತಮ್ಯದ ನೆಲೆಗಳು ಬದುಕನ್ನು ಆವರಿಸಿಕೊಂಡಿರುವ ಸ್ವರೂಪ ಮತ್ತು ವಿನ್ಯಾಸಗಳನ್ನು ಸಾಹಿತ್ಯದಲ್ಲಿ ಪುರಾಣ, ಇತಿಹಾಸಗಳಿಂದ ತೊಡಗಿ, ಸಾಮಾನ್ಯರ ಬದುಕಿನವರೆಗಿನ ವಿವಿಧ ಭಿತ್ತಿಗಳಲ್ಲಿ ಚಿತ್ರಿಸತೊಡಗಿದ್ದಾರೆ. ಸ್ಥಾಪಿತ ಮೌಲ್ಯಗಳ ಸಿದ್ಧ ಮಾದರಿಗಳನ್ನು ಮುರಿದು ಕಟ್ಟುವ ಕ್ರಿಯೆ ಸಶಕ್ತ ರೀತಿಯಲ್ಲಿ ಆರಂಭಗೊಂಡಿದೆ.

ತಿರುಮಲಾಂಬಾ, ಕಲ್ಯಾಣಮ್ಮ, ಸರಸ್ವತಿಬಾಯಿ ರಾಜವಾಡೆ, ತಿರುಮಲೆ ರಾಜಮ್ಮ, ಮಲ್ಲಿಕಾ ಕಡಿದಾಳ್, ಸರಸ್ವತಿ ದೇವಿ ಗೌಡರ ಮುಂತಾದವರಿಂದ ತೊಡಗಿದ ಪಯಣದ ಹಾದಿಯಲ್ಲಿ ವಿಜಯಮ್ಮ, ಎಸ್.ಮಾಲತಿ, ಸಾರಾ ಅಬೂಬಕ್ಕರ್, ಸಂಧ್ಯಾ ಎಸ್., ಎಂ.ಎಸ್.ವೇದಾ, ಹೇಮಾ ಪಟ್ಟಣಶೆಟ್ಟಿ, ವಿಜಯಾ ಸುಬ್ಬರಾಜ್, ಎಸ್.ವಿ.ಪ್ರಭಾವತಿ, ಗೀತಾ ರಾಮಾನುಜಂ ಮೊದಲಾದ ಅನೇಕ ನಾಟಕಕಾರ್ತಿಯರನ್ನು ಮಹಿಳಾ ನಾಟಕಸಾಹಿತ್ಯದ ಪ್ರಮುಖರೆಂದು ಹೆಸರಿಸಬಹುದಾಗಿದೆ. ಇವರೊಂದಿಗೆ ತಮ್ಮ ನಾಟಕಗಳ ವೈಶಿಷ್ಟದಿಂದ ಗಮನ ಸೆಳೆಯುತ್ತಿರುವ ಭಾಗೀರಥಿ ಹೆಗಡೆ, ಅಭಿಲಾಷ ಎಸ್, ದಮಯಂತಿ ನರೇಗಲ್ಲ, ಕಾತ್ಯಾಯಿನಿ ಕುಂಜಿಬೆಟ್ಟು, ಮಂಗಳಾ ಎನ್., ವಸುಮತಿ ಉಡುಪ, ಜಯಂತಿ ಮನೋಹರ್, ಸುಜಾತ ಅಕ್ಕಿ ಮೊದಲಾದವರನ್ನೂ ಗುರುತಿಸಬಹುದಾಗಿದೆ. ಇವರ ನಾಟಕಗಳನ್ನು ಆಯಾ ನಾಟಕಕಾರ್ತಿಯರ ಧರ್ಮ, ಪ್ರಾದೇಶಿಕತೆ, ಸಮುದಾಯ, ಸಾಮಾಜಿಕ ಸ್ಥಾನಮಾನ, ಆರ್ಥಿಕತೆ, ಶಿಕ್ಷಣ, ಉದ್ಯೋಗ ಮೊದಲಾದ ವಿಭಿನ್ನ ಹಿನ್ನೆಲೆಯಿಂದ ನೋಡಬಹುದಾಗಿದೆ. ಈ ಕಾಲಘಟ್ಟದ ಯಾವ ನಾಟಕಗಳನ್ನೂ ಗೆರೆ ಎಳೆದಂಥ ವಿಂಗಡನೆಯ ವ್ಯಾಪ್ತಿಯಲ್ಲಿ ತರುವುದಕ್ಕಿಂತ ಅವು ವ್ಯಕ್ತಪಡಿಸುವ ಸಂವೇದನೆಗಳ ಹಿನ್ನೆಲೆಯಲ್ಲಿ ಅವನ್ನು ಪರಾಮರ್ಶೆಗೆ ಒಳಪಡಿಸುವುದು ಉತ್ತಮವೆಂದು ಈ ಸಂದರ್ಭದಲ್ಲಿ ಭಾವಿಸಲಾಗಿದೆ. ಕನ್ನಡ ಸಾಹಿತ್ಯದ ವಿವಿಧ ಚಳುವಳಿಗಳಿಗೂ ಮಹಿಳಾ ಸಾಹಿತ್ಯಕ್ಕೂ ನಿಕಟವಾದ, ನೇರವಾದ ಸಂಬಂಧವಿದೆ ಎಂಬುದನ್ನು ಯಾವ ನೆಲೆಯಿಂದಲೂ ಗುರುತಿಸಲು ಸಾಧ್ಯವಾಗಿಲ್ಲ. ಮಹಿಳಾ ನಾಟಕ ಸಾಹಿತ್ಯಕ್ಕೂ ಇದೇ ಮಾತು ಅನ್ವಯಿಸುತ್ತದೆ. ನವೋದಯ, ನವ್ಯ, ಬಂಡಾಯ, ದಲಿತ ಹೀಗೆ ಯಾವುದೇ ಚಳುವಳಿಗಳ ಅವಧಿಯಲ್ಲೂ ನಾಟಕಕಾರ್ತಿಯರ ನಾಟಕಗಳು ನೇರವಾಗಿ ಪ್ರತಿಕ್ರಯಿಸದಿದ್ದರೂ ಪರಿವರ್ತನೆಗಳನ್ನು ಹೊಂದುತ್ತಾ ಬಂದಿದೆ.

ಪರಾಮರ್ಶನಾ ಗ್ರಂಥಗಳು

1. ಡಿ. ಆರ್. ನಾಗರಾಜ; ಸಾಹಿತ್ಯ ಕಥನ

2. ಮಾಸ್ತಿ ವೆಂಕಟೇಶ್ ಅಯ್ಯಂಗಾರ್; ವಿಮರ್ಶೆ -ಸಮಗ್ರ ಸಂಪುಟ, ಪುಟ, 49 ರಿಂದ 71

3. ಸುಮಿತ್ರಾಬಾಯಿ ಬಿ.ಎನ್.; ರಸವೆಂಬುದದೇನು? ತೋರಿ, ಕಣ್ತೆರೆಸಿ ಮಾಯವಾಗುವ ದಿಟ; ಪ್ರಜಾವಾಣಿ, ಮುಕ್ತಛಂದ, 05/24/2015

4. ಕಿಶನ್ ಪಟ್ನಾಯಕ್; ಮೂಲ ಲೇಖನ – `ಮ್ಯಾನ್‌ಕೈಂಡ್' ಪತ್ರಿಕೆ (ಹೆಣ್ಣಿಗೇನು ಬೇಕು : ಸ್ವಾತಂತ್ರ್ಯವೋ? ಸಮಾನತೆಯೋ? – ಕನ್ನಡ ಅನುವಾದ ಕಾಳೇಗೌಡ ನಾಗವಾರ )

© **Association of Academic Researchers and Faculties (AARF)**